ಅಧ್ಯಕ್ಷರು —ಪರ್ಯಾಲೋಚನಾ ಪ್ರಸ್ತಾವವನ್ನು ಈಗ ಸಭೆಯ ಮುಂದಕ್ಕೆ ಹಾಕುತ್ತೇನೆ.

ಪ್ರಸ್ತಾವ ಏನೆಂದರೆ.—''೧೯೮೩ನೇ ಇಸವಿಯ ಕರ್ನಾಟಕ ರಾಜ್ಯದ ಅಭಿವೃದ್ಧಿ ಮಂಡಲಿಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡಗಳ ಪರ್ಯಾಲೋಚನೆ ಖಂಡ ೨ ರಿಂದ ೩.

ಅಧ್ಯಕ್ಷರು.—ಈ ವಿಧೇಯಕವನ್ನು ಖಂಡ ಖಂಡವಾಗಿ ಮುಂದಕ್ಕೆ ಹಾಕುತ್ತೇನೆ. ಪ್ರಸ್ತಾವವೇನೆಂದರೆ ಎರಡು ಮತ್ತು ಮೂರನೇ ಖಂಡಗಳು ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕೃತವಾಯಿತು.—(ಎರಡು ಮತ್ತು ಮೂರನೆಯ ಖಂಡಗಳು ವಿಧೇಯಕದ ಅಂಗವಾದವು)

ಮೊದಲನೆಯ ಖಂಡ ಇತ್ಯಾದಿ.

ಅಧ್ಯಕ್ಷರು.—ಪ್ರಸ್ತಾವವೇನೆಂದರೆ ''ಮೊದಲನೆಯ ಖಂಡ ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಅಂಗವಾಗಿರಂತ್ತದೆ.''

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು. (ಪ್ರಥಮ ಖಂಡ. ಹೆಸರು ಮತ್ತು ಅವತರಣಿಕೆಗಳು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಅನುಮೋದನಾ ಪ್ರಸ್ತಾವ.

ಶ್ರೀ ಎಂ. ಚಂದ್ರಶೇಖರ್ (ಮಾನ್ಯ ನಗರಾಡಳಿತ ಮಂತ್ರಿಗಳು.—''೧೯೮೩ನೇ ಇಸವಿಯ ಕರ್ನಾಟಕ ಅಭಿವೃದ್ಧಿ ಮಂಡಲಿಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೇಳಿಕೊಳ್ಳುತ್ತೇನೆ''

ಅಧ್ಯಕ್ಷರು ಪ್ರಸ್ತಾವವೇನೆಂದರೆ.—''೧೯೮೩ನೇ ಇಸವಿಯ ಕರ್ನಾಟಕ ಅಭಿವೃದಿ ಮಂಡಲಿಗಳ (ತಿದ್ದುಪಡಿ) ವಿಧೇಯಕವನ್ನು ಅನುಮೋದಿಸುವುದು.,,

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಅನುಮೋದನೆ ನೀಡಲಾಯಿತು.

ಅಧ್ಯಕ್ಷರು.—ಈಗ ಸಮಯ ೫ ಗಂಟೆ ಆಗಿದೆ. ಇನ್ನೂ ಎರಡು ಮಸೂದೆಗಳಿವೆ.

ಶ್ರೀ ಎಂ. ಚಂದ್ರಶೇಖರ್.—ಇದು ಬರೀ ಡಿಲಿಷನ್ ಮಾಡುವುದಷ್ಟೆ ಹೆಚ್ಚು ಏನೂ ಇಲ್ಲ.

ಶ್ರೀ ಎನ್. ಜಿ. ನಾಯಕ್.—೫ ಗಂಟೆಗೆ ಮುಗಿಯಬೇಕು ಎಂದಮೇಲೆ ಮುಂಗಿಸಬೇಕು. we have to follow the discipline.

೧೯೮೩ನೇ ಇಸವಿಯ ಕರ್ನಾಟಕ ಬಯಲು ಪ್ರದೇಶಗಳಿಗೆ ಸಂಬಂಧಿಸಿದ (ವಿರೂಪಗೊಳಿಸುವುದನ್ನು ತಡೆಗಟ್ಟುವುದು) (ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ ಚಂದ್ರಶೇಖರ್.—(ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು)

ಮಾನ್ಯ ಅಧ್ಯಕ್ಷರೆ.—೧೯೮೩ನೇ ಇಸವಿಯ ಕರ್ನಾಟಕ ರಾಜ್ಯದ ಬಯಲು ಪ್ರದೇಶಗಳಿಗೆ ಸಂಬಂಧಿಸಿದ (ವಿರೂಪಗೊಳಿಸುವುದನ್ನು ತಡೆಗಟ್ಟುವುದು) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಪ್ರಸ್ತಾವವನ್ನು ಸೂಚಿಸಲಾಯಿತು

ಶ್ರೀ ವೈ. ರಾಮಕೃಷ್ಣ.—ಈ ಮಸೂದೆ ಚಿಕ್ಕದಾಗಿದ್ದರೂ ಇದರಲ್ಲಿ ತತ್ವ ಅಡಗಿದೆ. ಇದನ್ನು ಅಷ್ಟು ಸುಲಭವಾಗಿ ಬೇಗ ಪಾಸ್ ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ಬಯಲು ಪ್ರದೇಶ ಎಂದರೆ ಬೇರೆ ಅರ್ಥ ಬರುತ್ತದೆ. ಉತ್ತರ ಕರ್ನಾಟಕ ಪ್ರದೇಶದವರಿಗೆ ಇದು ಗೊತ್ತಿದೆ. ಧಾರವಾಡ, ಬಿಜಾಪುರ, ಬೆಳಗಾಂ ಜಿಲ್ಲೆಯವರಿಗೆ ಬಯಲು ಪ್ರದೇಶ ಎಂದರೆ ಏನು ಅರ್ಥ ಕೊಡುತ್ತೆ ದೆಂಬುದು ಗೊತ್ತಿದೆ,

ಶ್ರೀ ಜ್ಞಾನದೇವ ದೊಡ್ಡಮೇಟಿ.—ಬಯಲು ಪ್ರದೇಶ ಎಂದರೆ ಪರ್ವಾಗಿಲ್ಲ. ಬಯಲು ಕಡೆ ಎಂದರೆ ತಪ್ಪಾಗುತ್ತದೆ. ಅಷ್ಟೆ.

ಶ್ರೀ ಕೆ. ಎಚ್. ರಂಗನಾಥ್,—ಶ್ರೀ ಚಂದ್ರಶೇಖರ್ ಅವರೇ, ಯಾವುದನ್ನು ಡಿಲಿಟ್ ಮಾಡುತ್ತೀರಿ ? ನಿಮಗೆ ಅರ್ಥವಾಯಿತೋ ಇಲ್ಲವೋ ನಾನು ಹೇಳಿದ್ದು. ದಯಮಾಡಿ ಭಾಷಾಂತರ ಮಾಡುವವರಿಗೆ ಬೇರೆ ಪದ ಹಾಕಿ ಎಂದು ಪೇಳಿ. ಯಾರಾದರೂ ಓದಿದವರು ಏನಪ್ಪ ಇದು ಎಂದು ಹೇಳತಕ್ಕ ಪರಿಸ್ಥಿತಿ ಬರುತ್ತದೆ. ಎಲ್ಲರಿಗೂ ಅರ್ಥವಾಗುವ ರೀತಿಯಲ್ಲಿ ಶಬ್ದ ಬಳಸದೇ ಹೋದ, ಏನು ಪ್ರಯೋಜನ ?

ಶ್ರೀ ಎಂ. ಚಂದ್ರಶೇಖರ್.—ಮತ್ತೊಂದು ಪದ ಉಪಯೋಗ ಮಾಡಿಕೊಳ್ಳಬಹುದು. ಕರ್ನಾಟಕ ಬಹಿರಂಗ ಸ್ಥಳಗಳಿಗೆ ಸಂಬಂಧಿಸಿದ (ವಿರೂಪಗೊಳಿಸುವುದನ್ನು ತಡೆಗಟ್ಟುವುದು) (ತಿದ್ದುಪಡಿ) ವಿಧೇಯಕ, ಎಂದು ತಿದ್ದಿಕೊಳ್ಳಬಹುದಲ್ಲ ? ನಗರ ಪ್ರದೇಶಗಳಲ್ಲಿ ಯಾವುದೇ ಪ್ರದೇಶಗಳಲ್ಲಿ ಅಲ್ಲಿನ ಪ್ರದೇಶಗಳ ಅಧಿಕಾರಿಗಳ ಪರವಾನಗಿಯನ್ನು ಪಡೆಯದೆ ಪೊಸ್ಟರ್ ಮುಂತಾದವುಗಳನ್ನು ಹಚ್ಚಿ ಜಾಗವನ್ನು ವಿಕೃತಗೊಳಿಸುವುದನ್ನು ತಪ್ಪಿಸಲು ೧೯೫೧ರಲ್ಲೇ ಈ ವಿಧೇಯಕ ಪಾಡಿದ್ದರು. ಕೇಂದ್ರ ಸರ್ಕಾರಕ್ಕೆ ಹೋದಾಗ ೧೯೫೮ರಲ್ಲೇ ಇಸವಿಯ preservation of historical and archaeological monuments Actನಲ್ಲಿ ಇದೆ; ಆದ್ದರಿಂದ ನಿಮ್ಮ ರಾಜ್ಯದ ಕಾನೂನಿನಲ್ಲಿ ಇದನ್ನು ಡಿಲಿಟ್ ಮಾಡಿ ಎಂದು ಹೇಳಿದ್ದರು. ಆದ್ದರಿಂದ ಡಿಲಿಟ್ ಮಾಡುತ್ತಿದ್ದೇವೆ.

MR. SPEAKER.—I will put consideration motion to the vote of the House. the qustion is :

"That the Karnataka Open Places (Prevention of Disfigurement) (Amendment) Bill, 1983 be taken into consideration.

The motion was adopted.

Clause by clause considisation

CLAUSE 2

MR. SPEAKER. —The question is :

"That Clause 2 do stand part of the Bill",

The motion was adopted and Clause 2 was added to the bill.

CLAUSE 1 etc ,

MR. SPEAKER.—The question is:

"That clause–1, preamble and the enacting formula do stand part of the bill."

The motion was adopted ane clause, preamble and the enacting formual were added to the bill.)

MOTION TO PASS

SRI M. CHANDRASEKARA.—Sir m)ve that

'The Karnataka Opon Places (Prevention and Disfigurement)(Amendment) Bill, 1983 be passed.

MR. SPEAKER.—Motion moved. The question is;

'That the Karnataka Open Places Prevention and Disfigurement)(Amendment) Bill, 1983 be passed.

The Motion was adopted and the bill was passed

ನಿರ್ಲಕ್ಷಿನೇ ಇಸವಿಯ ಕರ್ನಾಟಕ ರಾಜ್ಯದ ವಕೀಲರುಗಳ ಕಲ್ಯಾಣ ವಿಧೇಯಕ.
ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮಂತ್ರಿ, ಸಂಸದೀಯ ವ್ಯವಹಾರಗಳ ಮಂತ್ರಿಗಳು)

ಮಾನ್ಯ ಅಧ್ಯಕ್ಷರೆ.—"ನಿರ್ಲಕ್ಷಿನೇ ಇಸವಿಯ ಕರ್ನಾಟಕ ರಾಜ್ಯದ ವಕೀಲರುಗಳ ಕಲ್ಯಾಣ ನಿಧಿ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಪ್ರಾರ್ಥಿಸುತ್ತೇನೆ,"

ಪ್ರಸ್ತಾವನೆಯನ್ನು ಸೂಚಿಸಲಾಗುವುದು.

ಶೆ-00 ಪಿ. ಎಂ.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೆ, ವಕೀಲರ ಕಲ್ಯಾಣ ನಿಧಿಗೆ ಸಂಬಂಧಪಟ್ಟ ವಿದೇಯಕ ಇದಾಗಿದೆ. ಹಿಂದಿನ ಸರ್ಕಾರದವರು ಇದನ್ನು ಜಾರಿಗೆ ತರಬೇಕೆಂಬ ಉದ್ದೇಶದಿಂದ ಮಾನ್ಯ ಸದಸ್ಯರಾದ ರಾಮಕೃಷ್ಣ ಅವರು ಈ ಬಿಲ್ಲನ್ನು ತಯಾರು ಮಾಡಿದ್ದರು. ಸಮಯ ಇಲ್ಲದೇ ಇದ್ದುದರಿಂದ ಸಭೆಯ ಮುಂದೆ ಇದನ್ನು ಅವರು ತರಲಾಗಲಿಲ್ಲ. ವಿರೋಧ ಪಕ್ಷದಲ್ಲಿ ಇದ್ದಾಗ ಅವರಿಂದ ಒಂದು ಪ್ರತಿಯನ್ನು ತೆಗೆದುಕೊಂಡು ಹೋಗಿ ಬೆಂಗಳೂರು ನಗರ ವಕೀಲ ಸಂಘದ ಮಾನ್ಯ ಸದಸ್ಯರ ಜೊತೆ ಮಾತನಾಡಿದ್ದೇವೆ. ಕೇರಳ ರಾಜ್ಯದಲ್ಲಿ ಈ ಕಾನೂನು ಜಾರಿಯಲ್ಲಿದೆ. ದೇಶದ ಇತರ ರಾಜ್ಯಗಳಲ್ಲೂ ಈ ಕಾನೂನು ಜಾರಿಯಲ್ಲಿದೆ. ಇದು ಸಾಮಾಜಿಕ ನ್ಯಾಯವನ್ನು ದೊರಕಿಸಿ ಕೊಡುವ ಒಂದು ಮೂಲಭೂತವಾದ ಕಾನೂನಾಗಿದೆ. ವಕೀಲರು ಎಲ್ಲರೂ ಕೂಡಾ ಹಣವಂತರೆಂಬ ಒಂದು ಸಾಮಾನ್ಯ ತಿಳುವಳಿಕೆ ಇದೆ. ಆದರೆ ಅವರಲ್ಲೂ ಬವಣೆ ಪಡುತ್ತಿರುವವರು ಬಹಳ ಜನ ಇದ್ದಾರೆ ಈ ಒಂದು ವೃತ್ತಿಯಲ್ಲಿ ತೊಡಗಿರುವಾಗ ಇವರುಗಳು ಹಣದ ಹೊಡುವಿಕೆಯನ್ನು ಮಾಡುವುದಕ್ಕಾಗುವುದಿಲ್ಲ. ಇಂತಹವರಿಗೆ ಅನುಕೂಲ ಆಗಲಿ ಎಂದು ಕಲ್ಯಾಣ ನಿಧಿಯ ಮೂಲ ತತ್ವವನ್ನು ಇಟ್ಟುಕೊಂಡು ಈ ಒಂದು ವಿದೇಯಕವನ್ನು ರೂಪಿಸಲಾಗಿದೆ. ಇದು ಬಹಳ ಅವಶ್ಯಕವಾಗಿ ಬೇಕಾಗಿರತಕ್ಕದ್ದಾಗಿದೆ ಇದರಲ್ಲಿ ಮುಖ್ಯವಾಗಿ ೨ ಅಂಶಗಳು ಇವೆ. ವಕೀಲರ ಕಲ್ಯಾಣ ನಿಧಿ ಸ್ಥಾಪನೆ ಮಾಡುವುದು. ಕಲ್ಯಾಣ ನಿಧಿಯನ್ನು ರೂಢಿಸಿಕೊಂಡು ಹೋಗಿ ಇದನ್ನು ವ್ಯವಸ್ಥಿತವಾಗಿ ನಡೆಸಿಕೊಂಡು ಹೋಗುವ ಆಡಳಿತಾತ್ಮಕ ಸೂತ್ರ ಇದರಲ್ಲಿ ಇದೆ. ಇದನ್ನು ನಡೆಸಿಕೊಂಡು ಹೋಗುವವರು ವಕೀಲರೇ. ಇದರ ಒಂದು ಫಂಡ್‌ಗೆ ಹಣವನ್ನು ಸೇರಿಸಿಕೊಂಡು ಹೋಗಲಾಗುತ್ತದೆ. ಈ ಒಂದು ಫಂಡ್‌ಗೆ ಬಾರ್ ಅಸೊಶಿಯೇಷನ್ ಅವರು ಕೊಡುವ ಬಾರ್ ಕೌನ್ಸಿಲ್ ಆಫ್